Date :02.06.2026

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಂದುವರಿದ ಮುಖ್ಯ ವಿಚಾರಣೆ – ಅರ್ಜಿದಾರರ ಪರ ಶ್ರೀ ಎನ್.ಡಿ.ಎಂ. ವಕೀಲರ ಪರ ಶ್ರೀಮತಿ ಹೆಚ್.ಆರ್.ಎನ್. ವಕೀಲರಿಂದ –**

ನಾನು ಈ ಕೇಸಿನಲ್ಲಿ 1 ನೇ ಅರ್ಜಿದಾರನಿದ್ದು, 2 ಮತ್ತು 3 ನೇ ಅರ್ಜಿದಾರರು ಕ್ರಮವಾಗಿ ನನ್ನ ದೊಡ್ಡಮ್ಮ ಮತ್ತು ತಮ್ಮನಿದ್ದು, ನನ್ನ ಮುಖ್ಯವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸರಿ ಇರುತ್ತವೆ.

ನನ್ನ ಸಾಕ್ಷಿಗೆ ಬೆಂಬಲಿತವಾಗಿ, ಅರ್ಜಿಯಲ್ಲಿ ಕಾಣಿಸಿದ ಆಸ್ತಿಯ ಬಗ್ಗೆ ಇರುವ 1 ಪಹಣಿ ಪ್ರತಿ, ದಿಃ 15.06.2022 ರಂದು 1 ನೇ ಎದುರುದಾರರು ಹೊರಡಿಸಿದ ಐತೀರ್ಪಿನ ದೃಢೀಕೃತ ಪ್ರತಿ, ಅವಾರ್ಡ ತಃಖ್ತೆಯ ದೃಢೀಕೃತ ಪ್ರತಿ ಮತ್ತು ದಿಃ 08.09.2022 ರ ದಿನಾಂಕದ ಅವಾರ್ಡ ನೋಟೀಸಿನ ನಕಲು ದೃಢೀಕೃತ ಪ್ರತಿ ಹಾಗೂ 1 ಪಹಣಿ ಪ್ರತಿ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–1 ರಿಂದ 5 ಎಂದು, ದಿಃ 13.12.2019 ರ ದಿನಾಂಕದ ಕರ್ನಾಟಕ ಸರ್ಕಾರದ ನಡವಳಿಯ ದೃಢೀಕೃತ ಪ್ರತಿ ಹಾಗೂ ಹೊಸದುರ್ಗ ಎ.ಪಿ.ಎಂ.ಸಿ ಕಾರ್ಯದರ್ಶಿಯವರು ನೀಡಿದ ಎಪಿಎಂಸಿಯಲ್ಲಿ ಮಾರಾಟವಾದ ಕೃಷಿ ಹುಟ್ಟುವಳಿಗಳ ಚಾವಕ ಮೌಲ್ಯದ ತಃಖ್ತೆಯ 9 ದಾಖಲೆಗಳ ದೃಢೀಕೃತ ಪ್ರತಿ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–6 ರಿಂದ 15 ಎಂದು, ಹೊಳಲ್ಕೆರೆ ಎಪಿಎಂಸಿ ಕಾರ್ಯದರ್ಶಿಯವರು ನೀಡಿದ ಕೃಷಿ ಉತ್ಪನ್ನ ಮಾರುಕಟ್ಟೆ ಧಾರಣೆಯ ಬಗ್ಗೆ ಇರುವ ಒಂದು ಪತ್ರದ ನಕಲು ದೃಢೀಕೃತ ಪ್ರತಿ ಹಾಜರುಪಡಿಸಿದ್ದು, ಅದನ್ನು ನಿಪಿ–16 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮುಂದುವರಿದ ಮುಖ್ಯವಿಚಾರಣೆಗಾಗಿ ವಕೀಲರು ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಿ ಮುಂದುವರಿದ ಮುಖ್ಯವಿಚಾರಣೆಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)
*ಓದಿ ಹೇಳಿ ಕೇಳಿ ಸರಿ ಇದೆ.*

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ